ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ

ವೈದ್ಯರು	–	2
ಕ್ಷ – ಕಿರಣ ತಂತ್ರಜ್ಞರು	–	1
ಕಿರಿಯ ಮಹಿಳಾ ಆರೋಗ್ಯ ಸಹಾಯಕಿ	–	2
ಗ್ರೂಪ್ ಡಿ	–	3

ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಹೊಸದಾಗಿ ವೈದ್ಯರುವಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುವುದರಿಂದ ನೇಮಕಾತಿ ಆದೇಶ ಹೊರಡಿಸುವಾಗ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು

ಖಾಲಿ ಇರುವ ಕ್ಷ – ಕಿರಣ ತಂತ್ರಜ್ಞರ ಹುದ್ದೆಯನ್ನು ವಿಶೇಷ ನೇರನೇಮಕಾತಿ ಮೂಲಕ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಲಾಗಿದೆ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಿದ ಕೂಡಲೇ ನೇಮಕ ಮಾಡಲಾಗುವುದು

ಕಿರಿಯ ಮಹಿಳಾಆರೋಗ್ಯ ಸಹಾಯಕಿಯರ ತರಬೇತಿ ಮುಗಿದ ನಂತರ ಹುದ್ದೆಗಳನ್ನು ಕುಡಲೇ ಭರ್ತಿ ಮಾಡಲಾಗುವುದು

ಆ) ಕಿರಿಯ ಆರೋಗ್ಯ ಸಹಾಯಕರ ಹಾಗೂ ಇತರೆ ಸಿಬ್ಬಂದಿ ವರ್ಗದವರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಈಗಾಗಲೇ ಪ್ರಚಾರ ಪಡಿಸಲಾಗಿದೆ ಸದ್ಯದಲ್ಲಿಯೇ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಿ ನೇಮಕಾತಿ ಆದೇಶ ನೀಡಲಾಗುವುದು

ಇ) ಲ್ಯಾಬ್ ಟೆಕ್ನೀಷಿಯನ್ನರ ಹುದ್ದೆಗಳು ಕೊರತೆ ಇರುವುದಿಲ್ಲ ಆದರೆ ಎಕ್ಸರೇ ಟೆಕ್ನೀಷಿಯನ್ ಹುದ್ದೆಗಳ ಕೊರತೆ ಮಾತ್ರ ಇದ್ದು ಈ ಹುದ್ದೆಗಳನ್ನು ವಿಶೇಷ ನೇರನೇಮಕಾತಿ ಸಮಿತಿ ಮುಖಾಂತರ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಪ್ರಕಟಿಸಿದ್ದು, ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಿದ ನಂತರ ಭರ್ತಿ ಮಾಡಲಾಗುವುದು

ಈ) ಇಲ್ಲ

ಪ್ರಾಥಮಿಕ ಶಿಕ್ಷಣ ಪಠ್ಯ ಪುಸ್ತಕಗಳ ಬದಲಾವಣೆ

24 (226) ಶ್ರೀ ಸದಾನಂದಗೌಡ ಡಿ ವಿ (ಪುತ್ತೂರು) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಾಥಮಿಕ ಶಿಕ್ಷಣ ಪಠ್ಯಪುಸ್ತಕ ಬದಲಾವಣೆಗೆ ಸರ್ಕಾರ ಚಿಂತನೆ ನಡೆಸಿದೆಯೆ

ಆ) ಇದರ ರೂಪುರೇಷೆಗಳು ಹಾಗೂ ಸಾದಕ – ಬಾದಕಗಳೇನು

ಇ) ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ಎಷ್ಟನೇ ತರಗತಿಗೆ ಹೊಸ ಮಾದರಿ ಪಠ್ಯಪುಸ್ತಕ ರಚಿಸಲು ಯೋಜಿಸಿದೆ

ಈ) ಇದನ್ನು ರಾಜ್ಯದ ಯಾವ ಜಿಲ್ಲೆಗಳ ಎಷ್ಟು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನ ಗೊಳಿಸಲಾಗುತ್ತದೆ

ಉ) ಪರಿಷ್ಕರಿಣಾ ಸಲಹಾ ಸಮಿತಿಯಲ್ಲಿ ಇರುವವರು ಯಾರು? ಪಠ್ಯಪುಸ್ತಕ ರಚನೆ ಯಾರಿಗೆ ವಹಿಸಲಾಗಿದೆ (ವಿವರ ಒದಗಿಸುವುದು)

ಪ್ರೋ ಬಿ ಕೆ ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಹೌದು

ಆ) ಪ್ರಸ್ತುತ ಜಾರಿಯಲ್ಲಿರುವ ಕನ್ನಡ ಭಾಷಾ ಮಾಧ್ಯಮದ ಪಠ್ಯಪುಸ್ತಕಗಳನ್ನು ಪರಿಷ್ಕರಿಸಿ. ಹೊಸದಾಗಿ ಆಕರ್ಷಣೀಯವಾಗಿ ರಚಿಸಲು ಕ್ರಮ ಕೈಗೊಳ್ಳಲಾಗಿದೆ

ಇ) 2004–05 ನ್ನು ಶೈಕ್ಷಣಿಕ ಸಾಲಿನಿಂದ ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುವುದು 1 ರಿಂದ 4ನೇ ತರಗತಿಯವರೆಗಿನ ಕನ್ನಡ ಭಾಷಾ ಮಾಧ್ಯಮದ ಪಠ್ಯಪುಸ್ತಕಗಳನ್ನು ಹೊಸದಾಗಿ ರಚಿಸಲಾಗುತ್ತಿದೆ

ಈ) ಇದನ್ನು ರಾಜ್ಯದ ನಾಲ್ಕು ಕಂದಾಯ ವಿಭಾಗಗಳ ನಾಲ್ಕು ಜಿಲ್ಲೆಗಳಲ್ಲಿನ ನಾಲ್ಕು ತಾಲ್ಲೂಕು ಶಿಕ್ಷಣ ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಲಾಗುವುದು

ಉ) ಈ ಸಲಹಾ ಸಮಿತಿಯು ಈ ಕೆಳಕಂಡವರನ್ನೊಳಗೊಂಡಿದೆ

1)	ಪ್ರೊ ಯು ಆರ್ ಅನಂತಮೂರ್ತಿ	ಅಧ್ಯಕ್ಷರು
2)	ಡಾ ಸಿದ್ದಲಿಂಗಯ್ಯ	ಸದಸ್ಯರು
3)	ಡಾ ಮಲ್ಲಿಕಾ ಘಂಟಿ	ಸದಸ್ಯರು
4)	ಡಾ ವಾಸವಿ	ಸದಸ್ಯರು
5)	ಪ್ರೋ ಜಯಲಕ್ಷ್ಮಿ	ಸದಸ್ಯರು
6)	ಡಾ ಹೇಮಾ ಪಟ್ಟಣಶೆಟ್ಟಿ	ಸದಸ್ಯರು
7)	ಡಾ ಷಡಕ್ಷರಪ್ಪ ಶೆಟ್ಟರ್	ಸದಸ್ಯರು
8)	ಡಾ ಮಮ್ತಾಜ್ ಆಲಿಖಾನ್	ಸದಸ್ಯರು

ಪಠ್ಯಪುಸ್ತಕ ರಚನೆ ಕಾರ್ಯವನ್ನು ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ವಹಿಸಿದೆ

ರಾಜ್ಯದಲ್ಲಿ ಕಾಲೇಜು ಶಿಕ್ಷಣ ನಿರ್ದೇಶನಾಲಯವನ್ನು ಮುಚ್ಚಲು ತೀರ್ಮಾನಿಸಿರುವುದು

25 (508) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಉನ್ನತ ಶಿಕ್ಷಣ ಮತ್ತು ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಾಲೇಜು ಶಿಕ್ಷಣ ನಿರ್ದೇಶನಾಲಯದಲ್ಲಿ ಎಷ್ಟು ಜನ ನೌಕರರು ಕಾರ್ಯನಿರ್ವಹಿಸುತ್ತಿದ್ದಾರೆ ಹುದ್ದೆವಾರು ವಿವರ ನೀಡುವುದು

ಆ) ಸರ್ಕಾರ ಈ ನಿರ್ದೇಶನಾಲಯವನ್ನು ಮುಚ್ಚಲು ತೀರ್ಮಾನಿಸಿದೆಯೇ ಹಾಗಿದ್ದಲ್ಲಿ ಕಾರಣ ನೀಡುವುದು

ಇ) ಈ ನಿರ್ದೇಶನಾಲಯವನ್ನು ಪೂರ್ಣವಾಗಿ ಮುಚ್ಚಿದಲ್ಲಿ ಇಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುವುದು

ಈ) ಈ ನಿರ್ದೇಶನಾಲಯ ನಿರ್ವಹಿಸುತ್ತಿದ್ದ ಕಾರ್ಯವನ್ನು ಸಂಬಂಧಿಸಿದ ವಿಶ್ವ ವಿದ್ಯಾಲಯಗಳಿಗೆ ಹಸ್ತಾಂತರಿಸಲಾಗುವುದೇ